## ನಾಡ ಸಿರಿ

ಕವಿ ಪರಿಚಯ: ನಂಜುಂಡಕವಿ, ಕ್ರಿಸ್ತಶಕ 1508ರ ಕಾಲದಲ್ಲಿದ್ದ ಈತ ಮೂರನೇ ಮಂಗರಸನ ಮಗ. ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಕಲ್ಲಹಳ್ಳಿ ಈತನ ಊರು. ಈತನ ಕೃತಿ ಕುಮಾರರಾಮನ ಕಥೆ ಅಥವಾ ಕುಮಾರರಾಮನ ಸಾಂಗತ್ಯ

**ಸಾರಾಂಶ**

ಆ ಮೇರು ಪರ್ವತದ ದಕ್ಷಿಣ ಭಾಗದಲ್ಲಿ ಸುಂದರವಾಗಿ ಶೋಭಿಸುವ ಭೂಪ್ರದೇಶದ ಪಕ್ಕದಲ್ಲಿಯೇ ಕರ್ನಾಟ ಮಹೀಮಂಡಲವು ಚೆಲುವಿನಿಂದ ಕೂಡಿತ್ತು

ಕಾವೇರಿಯಿಂದ ಗೋದಾವರಿವರೆಗೆ ನೆಲೆಸಿರುವ ಕರ್ನಾಟ ಭೂಪ್ರದೇಶದ ಭಾಗದಲ್ಲಿ ವಾಸಿಸುವ ಜನಪದರ ಕುರಿತು ಯಾವ ಕವಿ ತಾನೆ ವರ್ಣಿಸಲು ಸಾಧ್ಯ

ಭೂರಮೆಯು ಅಥವಾ ಭೂದೇವಿಯು ಉಟ್ಟು ಬೇಡವೆಂದು ತೆಗೆದಿಟ್ಟ ರೇಷ್ಮೆಯ ಸೀರೆಗಳಂತೆ ಭೂರಿ ನದಿಗಳು ಕಂಗೊಳಿಸುತ್ತಿದೆ. ಇಂತಹುದೇ ನದಿಗಳು ಈ ಕರ್ನಾಟ ಭೂಮಿಯಲ್ಲಿ ಅಲ್ಲಲ್ಲಿ ಶೋಭಿಸುತ್ತಿದೆ(ಕರ್ನಾಟಕದ ನದಿಗಳೆಲ್ಲಾ ಸಮೃದ್ಧವಾಗಿ ಹರಿಯುತ್ತಿವೆ ಎಂದರ್ಥ)

ತುಂಬಿ ಹರಿಯುವ ನದಿಯೆಂಬ ತೊರೆಹೆಣ್ಣು ತನ್ನ ಎರಡು ಕೈಗಳನ್ನು ಚಾಚಿ ಸಮುದ್ರವನ್ನು ಒಲಿದು ಅಪ್ಪಿಕೊಳ್ಳುವಂತೆ ಶೋಭಿಸುತ್ತಿದ್ದವು ಅಲ್ಲಿರುವ ಕಾಲುವೆಗಳು ಅದರ ಶ್ರೀಮಂತಿಕೆಯನ್ನು ಹೇಗೆ ತಾನೆ ಬಣ್ಣಿಸಲಿ ಎಂದಿದ್ದಾನೆ ನಂಜುಂಡ ಕವಿ

ಆ ಪ್ರದೇಶದಲ್ಲಿ ಕುಂದದಿರುವ ಫಲ ಸಮೂಹಗಳಿಂದ ಕೂಡಿ ಶೋಭಿಸುವ ಆ ನಂದನವನವು ಇಂದ್ರನ ನಂದನವನವನ್ನು ಹೋಲುತ್ತಿತ್ತು

ಎಳನೀರು, ಮಾವು ಹಲಸು ಬಾಳೆ ಕರ್ಜೂರ ಚಂದನ ಸಂಪಿಗೆ ಮುಂತಾದಂತಹ ಹಲವು ಫಲಗಳಿಂದ ಕೂಡಿದ ತೋಟವು ನೋಡುಗರ ಕಣ್ಣಿಗೆ ಪಾರಣೆಯಂತೆ (ಮೃಷ್ಟಾನ್ನ ಭೋಜನದಂತೆ) ರಂಜಿಸುತ್ತಿತ್ತು.

ದೇವ ನದಿಗಳಿಂದ ಕೂಡಿರುವ ಈ ಭೂಮಿ ಎಂಬ ವನಿತೆಯು ಧಾನ್ಯದ ಅಕ್ಷಯನಿಧಿಯನ್ನು ಹೊಂದಿ ದೇವಲೋಕವನ್ನೇ ಭೂಮಿಗೆ ತರಿಸಿದಂತೆ ಯಾವಾಗಲೂ ಶೋಭಿಸುತ್ತಿತ್ತು. ಇಲ್ಲಿ ಕರ್ನಾಟಕವು ನಂಜುಂಡ ಕವಿಯ ಕಾಲದಲ್ಲಿ ಸಮೃದ್ಧವಾಗಿ ಕೂಡಿದ ನದಿ,ಬೆಳೆಗಳಿಂದ ಕೂಡಿತ್ತು ಎಂದು ತಿಳಿಸಿದ್ದಾರೆ

ಈ ಭೂಪ್ರದೇಶದ ಚಿಕ್ಕ ಹಳ್ಳಿಗಳೂ ತೋಟದಿಂದ ಕೂಡಿದ ಕೊಳ, ಆ ಕೊಳದಲ್ಲಿ ಕಮಲಗಳಿಂದ ತುಂಬಿದ್ದು, ದುಂಬಿಗಳಿಂದ ಕೂಡಿದ್ದವೆಂದ ಮೇಲೆ ಅಲ್ಲಿಯ ವೈಭವ ಎಂತಹುದು.

ಈ ಪ್ರದೇಶದಲ್ಲಿ ಚಿಗುರಿನಿಂದ ಕೂಡಿದ ಮಾವು, ಮಲ್ಲಿಗೆ ಮಲ್ಲಿಗೆಯ ಬಳ್ಳಿಗಳು ಇವುಗಳಿಂದ ಕೂಡಿದ ಸೌಂದರ್ಯವನ್ನು ಆಸ್ವಾದಿಸುವ ಭೋಗಿಗಳೇ ಇಲ್ಲಿ ಇದ್ದಾರೆ

ಆ ವನದಲ್ಲಿ ಹಂಸ ಗಿಣಿ ಕೊಕ್ಕರೆ ಜೋಡಿಹಕ್ಕಿ ಕೋಗಿಲೆ ಚಕ್ರವಾಕ ನವಿಲು ಮುಂತಾದಂತಹ ಹಕ್ಕಿಗಳಿದ್ದವು

ಅರಳಿರುವ ತಾವರೆ, ಅರಳಿರುವ ನೈದಿಲೆಗಳಿಂದ ಕೂಡಿದ ಕೊಳಗಳು ಮತ್ತು ಭತ್ತದ ಗದ್ದೆಗಳಿಗೆ ಆಶ್ರಯ ತಾಣವಾಗಿದೆ ಈ ನೆಲ. ಇದನ್ನು ಹೇಗೆ ತಾನೇ ವರ್ಣಿಸಲಿ.

ಹಂಸ , ನುಡಿಯುವ ಗಿಳಿ, ನಲಿದಾಡುವ ಬೆಡಗಿನ ನವಿಲು, ಕೂಗಿಡುವ ಕೋಗಿಲೆ ಇವುಗಳ ಕೂಗು ದಾರಿಹೋಕರ ಮನಸ್ಸನ್ನು ಚಂಚಲಗೊಳಿಸುತ್ತದೆ

ಕಡಲುಗಳು ನಾಡ ಸಿರಿಯ ಮುಖವನ್ನು ನೋಡಲು ಬಂದವೇನೋ ಎಂಬಂತೆ ಹಿರಿದಾದ ತೆರೆಗಳಿಂದ  ಮೇರಿ  ಮೀರಿ ಬಂದಂತೆ ಕಂಗೊಳಿಸುತ್ತಿದ್ದವು.

ಕೃಷಿ ಕೆಲಸದಲ್ಲಿ ನಿರತರಾದ ಪಾಮರಿಯರು ಅಂದರೆ ಹೆಣ್ಣುಮಕ್ಕಳು, ನಾಟಿ ಮಾಡುವ, ಕಳೆಕೀಳುವ, ಬಿತ್ತನೆಗೆ ಹದವಾಗಿ ನೀರು ಉಣಿಸುವ ಬಗೆಯನ್ನು, ಸಸಿನೆಡುವ ಕ್ರಮವನ್ನು ಅರಿತ ಬಗೆಯೇ ಬೆರಗು ಮೂಡಿಸುತ್ತದೆ.

ಅರವಟ್ಟಿಗೆ ಎಂಬ ಧರ್ಮಛತ್ರಗಳಲ್ಲಿ ಬಾಯಾರಿದ ದಾರಿಹೋಕರಿಗೆ ನೀರನ್ನು ಎರೆಯುವ ಹೆಣ್ಣು ಮಕ್ಕಳ ಕಣ್ಣು ಎಂಬ ದುಂಬಿಯು ದಾರಿಹೋಕರ ಮನಸ್ಸನ್ನು ಮನ್ಮಥನ ಹೂಬಾಣಕ್ಕೆ ಗುರಿ ಮಾಡುತ್ತಿದೆ ಎಂದರೆ ಹಳ್ಳಿಯ ಹೆಣ್ಣುಮಕ್ಕಳ ಸೌಂದರ್ಯ ಇಲ್ಲಿ ಮುಖ್ಯವಾಗುತ್ತದೆ

ಸಾಹಿತ್ಯ-ಸಂಗೀತ ಮುಂತಾದಂತಹ ಕಲೆಗಳಲ್ಲಿ ಪ್ರೌಢಿಮೆಯನ್ನು ಹೊಂದಿರುವ ಜಾಣ ತರುಣರಿಗೆ ಪ್ರಾಣವನ್ನೇ ಕೊಡುವಂತಹ ಹೆಣ್ಣುಮಕ್ಕಳಿದ್ದಾರೆ. ಕಲೆಯ ಜ್ಞಾನವಿಲ್ಲದ ತರುಣಿಯರು ಈ ನಾಡಿನಲ್ಲಿ ಇಲ್ಲ.

ಈ ನಾಡಿನಲ್ಲಿ ವೀರರು ವಿತರಣಗುಣಶೂರರು, ಸಾರ ಗುಣಗ್ರಾಹಿ ರಸಿಕರೇ ಇದ್ದು,  ಹೇಡಿಗಳು ಲೋಭಿಗಳು ದುರ್ವಿಕಾರಿಗಳು ಈ ನೆಲದಲ್ಲಿ ಇಲ್ಲ ಎಂದು ಕವಿ ಅಲ್ಲಿನ ಜನಪದರ ಕುರಿತು ಕೊಂಡಾಡಿದ್ದಾನೆ